ಮಕ್ಕಳಿಗೆ ಅರ್ಧ ಟಿಕೆಟ್. ಮಕ್ಕಳ ವಯಸ್ಸು ಕೇಳಬೇಕು. ಕ್ಲಾಸ್ ಎಷ್ಟೆಂದು ಕೇಳಬೇಕು. ಎತ್ತರ, ದಪ್ಪ, ಮುಖ ನೋಡಿ ಅಂದಾಜು ಮಾಡಬೇಕು. ಇನ್ನೂ ಚಿಕ್ಕ ಮಕ್ಕಳಿಗೆ ಟಿಕೆಟ್ ಇಲ್ಲ. ಇಲ್ಲಿ, ಚರ್ಚೆ ಚೌಕಾಸಿಗಳಿಗೆ ಬಹಳ ಅವಕಾಶ ಇರುತ್ತದೆ. ಅಮ್ಮಾ ಮಹಾತಾಯಿ! ನೀನು ಟಿಕೆಟ್ ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ! ಆ ದೊಡ್ಡ ಮಗುವನ್ನು ತೊಡೆ ಮೇಲೆ ಕೂರಿಸಿಕೊಂಡು ಮೂಳೆ ಮುರಿದುಕೊಳ್ಳಬೇಡ... ಎಲಾ ಕತೆಯೇ! ಈ ಅಪ್ಪಅಮ್ಮಂದಿರಿಗೆ ಕಂಡಕ್ಟರ್ ಮುಂದೆ ಮಾತ್ರ ಅವರ ಮಕ್ಕಳ ವಯಸ್ಸು, ಕ್ಲಾಸು ಮರೆತು ಹೋಗುವುದು... ಈ ಮಗು ಗಂಡೋ ಹೆಣ್ಣೋ?

ಬಸ್ ಹತ್ತಿದ ಕೂಡಲೇ ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡು ಕುಳಿತುಕೊಳ್ಳುವವರು; ಅದನ್ನು ಸಿಕ್ಕಿಸಿಕೊಂಡೇ ಕಂಡಕ್ಟರರ ಮಾತುಗಳನ್ನು ಕೇಳಿಸಿಕೊಳ್ಳುವ ಉಪಕಾರ ಮಾಡುವವರು ಮತ್ತು ಇವರು ಹೋಗುವ ಜಾಗ, ಇಳಿಯುವ ಜಾಗ ಎಲ್ಲವನ್ನೂ ಕೇಳುವ, ತಿಳಿದುಕೊಳ್ಳುವ ಜವಾಬ್ದಾರಿಯನ್ನೂ ಕಂಡಕ್ಟರರಿಗೇ ಕೊಡುವವರು; ಆರಾಮವಾಗಿ ಕುಳಿತು ಟಿಕೆಟ್ ಇತ್ಯಾದಿ ಮರೆತು ಫೋನ್ ಮಾಡುತ್ತಾ, ಸಿನೆಮಾ ನೋಡುತ್ತಾ, ವಾಟ್ಸಾಪ್ ನೋಡುತ್ತಾ ಸಮಯದ ಸದ್ಬಳಕೆ ಮಾಡುವವರು... ಈ ಮಕ್ಕಳಿಗೆಲ್ಲಾ ಯಾವ ಜನ್ಮದಲ್ಲಿ ನಾನು ಸೂಲ್ಗಿತ್ತಿ ಆಗಿದ್ದೆನೋ, ಅಪ್ಪನಾಗಿದ್ದೆನೋ?

ಈ ಮಂಗಳೂರು ಬಿ.ಸಿ ರೋಡ್ **transfer** ಅಲ್ಲದ **transfer**ನಿಂದ ನನಗೆ ರಗಳೆ ಹಿಡಿದುಹೋಗಿತ್ತು. 'ಎಲ್ಲಾ ಒಮ್ಮೆ **streamline**ಗೆ ಬರುವ ತನಕ' ಎಂದು ಹೇಳಿದ್ದರೂ 3–4 ತಿಂಗಳು ಕಳೆದರೂ ಅದು ಮುಗಿಯುವಂತೆ ಕಾಣಲಿಲ್ಲ. 'ನನಗೆ ಕಷ್ಟ ಆಗುತ್ತದೆ' ಎಂದು ಯಾರಲ್ಲಿ ಹೇಳುವುದು? 'ಕಷ್ಟವಾದರೆ ಬಿಡು' ಎನ್ನುತ್ತಾರೆ ಅಷ್ಟೇ. ಪಾರ್ಸೆಲ್ ಎಲ್ಲಿ ಬಿದ್ದಿದೆ ಎಂದು ಹುಡುಕಿಕೊಂಡು ಬಿ.ಸಿ ರೋಡ್, ಮೇಲ್ಕಾರ್, ಕಲ್ಲಡ್ಕ ಎಂದು ಎದ್ದುಬಿದ್ದು ಓಡುವುದು; ಹೊತ್ತು ಗೊತ್ತಿಲ್ಲದೆ ಊಟ; ಬಸ್ಸಿನಲ್ಲಿ ಅರೆನಿದ್ರೆ; ಬಟ್ಟೆಯೆಲ್ಲಾ ಚಂಡಿ, ದೂಳು; ಸಾಯಂಕಾಲವಾಗಲಿ, ಬೆಳಿಗ್ಗೆಯಾಗಲಿ ಒಂದು ಚಿಕ್ಕ ವಾಕಿಂಗ್ ಹೋಗದೆ ಎರಡು ತಿಂಗಳಾಯಿತು; ಬಟ್ಟೆಗೆ ಇಸ್ತ್ರಿ ಹಾಕದೆ ಎರಡು ತಿಂಗಳಾಯಿತು, ಖರ್ಚು ಒಂದಕ್ಕೆರಡಾಗಿ ಕಿಸೆ, ಅಕೌಂಟ್ ಕರಗಿತು, ಸೊರಗಿತು.... ಹೇಳಬೇಕು, ಒಮ್ಮೆ ಬೆಂಗಳೂರಿನ ಸೂಪರ್‌ವೈಸರ್ ಹತ್ತಿರ ಹೇಳಿ ಬಿಡಬೇಕು.

ಆ ದಿನ ಕಲ್ಲಡ್ಕ ಬಿಡುವಾಗಲೇ ರಾತ್ರಿ ಎಂಟು ಗಂಟೆ ಕಳೆದಿತ್ತು. ಹಿಂದೆ ಮುಂದೆ ನೋಡದೆ ಬಸ್ ಹತ್ತಿ ನೋಡುತ್ತೇನೆ, ಅದು ಬಿ.ಸಿ ರೋಡ್ ಡಿಪೋದಲ್ಲಿ ನಿಲ್ಲುವ ಬಸ್! ಬಸ್ ಸ್ಟ್ಯಾಂಡಿನಲ್ಲಿ ಇಳಿದು ಮಂಗಳೂರಿಗೆ ಹೋಗುವ ಬಸ್ ಕಾಯುತ್ತಾ ನಿಂತೆ. ಅಷ್ಟು ಹೊತ್ತಿಗೆ ಸರಿಯಾಗಿ ನಮ್ಮ ಮಂಗಳೂರು ಪುತ್ತೂರು ಬಸ್ಸಿನ ಕಂಡಕ್ಟರ್ ಇನ್ನೊಬ್ಬರು ಕಂಡಕ್ಟರ್ ಜತೆಗೆ ಟಿ.ಸಿಯವರ ಕ್ಯಾಬಿನ್ನಿನಿಂದ ಹೊರಬಂದರು. ಅಲ್ಲಿಯೇ ನಿಂತಿದ್ದ ನನ್ನನ್ನು ನೋಡಿ 'ಇವತ್ತು ತಡ ಆಯ್ತಾ?' ಎಂದು ಕ್ಷೀಣವಾಗಿ ನಕ್ಕರು.

'ಹೌದು ಸರ್! ಕಲ್ಲಡ್ಕದಲ್ಲಿಯೇ ತಡ ಆಯ್ತು. ನಿಮ್ಮದು ಇದೇ ಡಿಪೋವಾ? ಮನೆ ಹತ್ರ ಉಂಟಾ?'

'ಇಲ್ಲ, ನಂದು ಪುತ್ತೂರು ಡಿಪೋ. ಮನೆ ಇಲ್ಲಿ.'

'ಕಷ್ಟ ಆಗುದಿಲ್ವಾ?'

'ಕಷ್ಟ ಆಗ್ತದೆ. ನೋಡ್ಬೇಕು, **transfer** ಕೊಡುವಾ ಅಂದಿದ್ದಾರೆ, ಕೊಡಬಹುದು.

'ಮನೆ?'

'ಇಲ್ಲಿಯೇ ಮೊಡಂಕಾಪು. ಇಲ್ಲಿಂದ ಒಂದು ಕಿಲೋಮೀಟರ್ ಆದೀತು.'

'ಹೌದಾ? ನನ್ನ ಒಬ್ರು ದೋಸ್ತಿ ಇದ್ದಾರೆ ಅಲ್ಲಿ. ಅವರ ಮನೆಗೆ ಆಗಾಗ ಬರುವುದುಂಟು'.

'ನಾನು ಹೌದೇ? ಯಾರು? ಹಾಗೆ ನನಗೂ ತುಂಬಾ ಜನರ ಪರಿಚಯ ಇಲ್ಲ ಇಲ್ಲಿ.'

'ನಾಗರಾಜ, ನಾಗರಾಜ ಸಫಲಿಗ'.

'ಹೋ! ಅವರಾ! ಅವರು ಗೊತ್ತು. ನಾವು ನೆರೆಹೊರೆಯವರು. ಅಂದರೆ ಅವರಿಗೆ ನಾವು ಹೊರೆ ಎಂದರ್ಥ'!

'ಹಾಗೇನಿಲ್ಲ ಬಿಡಿ! ಅಕ್ಕಪಕ್ಕದವರು ಎಂದ ಮೇಲೆ ಒಬ್ರಿಗೊಬ್ಬರು ಸುಖ ಕಷ್ಟಕ್ಕೆ ಒದಗಬೇಕಲ್ಲ? ಭಾರ



ಎಂದುಕೊಂಡರೆ ಹೇಗೆ? ಒಟ್ಟಿಗೇ ಬದುಕುವುದು ಅವರ ಜೋಕಿಗೆ ನಗುತ್ತಾ ನಾನೆಂದೆ.

'ಬರುತ್ತೇನೆ' ಎಂದು ಹೇಳಿ ವಿದ್ಯುದ್ದೀಪದ ಬೆಳಕಿಗೆ, ಕಟ್ಟಡ, ಕಂಬ ಇತ್ಯಾದಿಗಳ ಅಡ್ಡ ನೀಟ ನೆರಳಿಗೆ, ಕತ್ತಲೆಗೆ ತಮ್ಮ ನೆರಳನ್ನು ನೇಯುತ್ತಾ ನಡೆದು ಮರೆಯಾದರು.

... ಹೇಳಬೇಕು, ಬೆಂಗಳೂರಿನ ಸೂಪರ್‌ವೈಸರ್ ಬಳಿ ಹೇಳಿ ಬಿಡಬೇಕು ಎಂದುಕೊಳ್ಳುತ್ತಿರುವಾಗಲೇ 'ನಾನೇ ವಿಷಯ ಪ್ರಸ್ತಾಪ ಮಾಡದಿದ್ದುದು ಒಳ್ಳೆಯದೇ ಆಯಿತು' ಎಂಬಂತೆ ಬೆಂಗಳೂರಿನವರೇ ಹೊಸ ಪ್ರಸ್ತಾಪ ತಂದರು. ಬಿ.ಸಿ ರೋಡಿನ ರಗಳೆಗೆ ಇನ್ನೊಬ್ಬರನ್ನು ನೇಮಕ ಮಾಡಿಕೊಳ್ಳುವ; ನೀವು ಬಿ.ಸಿ ರೋಡ್, ಮೇಲ್ಕಾರ್ ಎಂದು ಓಡಾಡುತ್ತಿದ್ದರೆ ಅಲ್ಲಿ ಮಂಗಳೂರಿನ ಕೆಲಸ ಕೂಡ ಹಾಳು' ಎಂದು ಹೇಳಿದರು.

'ಅಬ್ಬ, ಬದುಕಿದೆ' ಎಂದುಕೊಂಡೆ. ಈ ವಾರ ಅಥವಾ ಮುಂದಿನ ವಾರ ಮುಕ್ತಿ ಸಿಗಬಹುದು ಎಂಬ ನಿರೀಕ್ಷೆಯ ಉಮೇದಿನಲ್ಲಿ ಇವತ್ತು ರಾತ್ರಿ ಉಳಿದು, ಪಟ್ಟಾಂಗ ಹೊಡೆಯಲು ನಾಗರಾಜ ಸಫಲಿಗರ ಮನೆಗೆ ಹೋದೆ. ನಾನು ಮೊದಲು ಆಗಾಗ ಬರುತ್ತಿದ್ದೆ. ಈಗೀಗಷ್ಟೇ ಸ್ವಲ್ಪ ತೆಳುವಾದದ್ದು. ಊಟವಾದ ಅನಂತರ ಅಂಗಳದಲ್ಲಿ ನಿಂತಾಗ ಫಕ್ಕನೆ ನೆನಪಾಯಿತು. ಕೇಳಿದೆ.

'ಓಹ್, ಅವರಾ! ಅದೇ ನೋಡು ಅವರ ಮನೆ ಎಂದು ಪಕ್ಕದ ಒಂದು ದೊಡ್ಡ ಮನೆಯ ಬಲಬದಿ ಗೋಡೆಗೆ ಕೈಕೂರಿಸಿ ಮಾಡಿದ ಒಂದು ಕಡ್ಮಾಡಿನತ್ತ ಕೈತೋರಿಸಿದ.

'ಬಂದಿರಬಹುದೇ ಮನೆಗೆ? ನೋಡಿ ಮಾತನಾಡಿಸಿ ಬರುವ, ಅಲ್ಲವೇ?'

ನಾಗರಾಜ ಏನೂ ಹೇಳಲಿಲ್ಲ. ನಿಧಾನವಾಗಿ ಅತ್ತ ನಡೆದೆವು. ನಾವು ಒಂದೆರಡು ಮಾರಿನ ಸಣ್ಣ ಕಾಲ್ದಾರಿ, ಒಂದು ಗೇಟ್, ಒಂದು ಅಂಗಳ, ಒಂದು ಬಾವಿ ದಾಟುವ ಹೊತ್ತಿನಲ್ಲಿ ಕಂಡಕ್ಟರ್ ಸಂಸಾರ ಸಾಗರ ದಾಟುವುದನ್ನು ಹೇಳಿದ ನಾಗರಾಜ. ತಾಯಿ ಪಾರ್ಶ್ವವಾಯುವಾಗಿ ಮಲಗಿದ್ದಾರೆ. ತಂದೆ ಕಳೆದ ವರ್ಷ ತೀರಿಕೊಂಡರು. ಮಗಳು ಆರನೇ ಕ್ಲಾಸ್. ಎರಡನೆಯ ಮಗ ನಡೆಯುವುದಿಲ್ಲ, ಸರಿಯಾಗಿ ಮಾತನಾಡುವುದಿಲ್ಲ. ಹೆಂಡತಿ ಒಳ್ಳೆಯವಳು ಪಾಪ; ನರಳಿ, ಅನುಭವಿಸಿ, ದುಡಿದು ಸಾಕಾಗಿ ಆಗಾಗ ಮೂರ್ಛೆ ತಪ್ಪಿ ಬೀಳುವ ಕಾಯಿಲೆ ಬಂದಿದೆ. ಹಾಸನದಲ್ಲಿ ರಿಕ್ಷಾ ಆಕ್ಸಿಡೆಂಟ್ ಆಗಿ ಕಾಲು ಮುರಿದುಕೊಂಡ ತಮ್ಮ ಕೂಡ ಆಸ್ಪತ್ರೆ ಅನುಕೂಲವೆಂದು ಇಲ್ಲಿಗೇ ಬಂದಿದ್ದಾನೆ. ಇವರಿಗೆ ಪುತ್ತೂರು ಡಿಪೋ. ಅವರಿವರನ್ನು ಬೇಡಿ ಹೇಗೋ ರಾತ್ರಿ ಬಿ.ಸಿ ರೋಡಿಗೆ ಬರುತ್ತಾರೆ...

'ಟಕ್ ಟಕ್' ಬಾಗಿಲು ಬಡಿದೆ. ಅವರೇ ಬಾಗಿಲು ತೆಗೆದರು. ನಮ್ಮನ್ನು ನೋಡಿ ಗರಬಡಿದು ನಿಂತರು ಒಂದು ಕ್ಷಣ.

'ಬನ್ನಿ ಬನ್ನಿ'

... ನಾವು ಒಳಹೋಗಲಿಲ್ಲ. ಅವರೇ ಹೊರಬಂದರು.

....

'ಇದು ಒರಿಜಿನಲ್ ಸ್ಟೋರಿ ಸರ್...'

...

ಕಾಲ ಬದಲಾಗಿದೆ ಸರ್... ಅರ್ಥ ಮಾಡಿಕೊಳ್ಳುತ್ತಾರೆ... ಸಹಾಯ ಮಾಡ್ತಾರೆ ಸರ್! ಸದ್ಯವೇ ಬಿ.ಸಿ ರೋಡ್ ಡಿಪೋ ಸಿಗಬಹುದು ಸರ್...

'ಸಿಕ್ಕಿದರೆ ಸ್ವಲ್ಪ ಅನುಕೂಲ ಆಗುತ್ತದೆ ಅಲ್ವೇ?'

'ಹೌದು ಸರ್... ನಮ್ದು ಸಕಲೇಶಪುರ... ನಮ್ಮ ಜನರ ಮುಂದೆ ಇದು ಬೇಡ... ಅದು ಇನ್ನೂ ಕಷ್ಟ ಸರ್... ಅದಕ್ಕೇ ಇಲ್ಲಿಯೇ ಇದ್ದೀವಿ'

'...'

'ನಾನಿಲ್ಲಿ ಮೂಕ ಸರ್...'

...

'ಟಿಕೆಟ್ ಕಳ್ಕೊಂಡುಬಿಟ್ಟೆವು ಸರ್... ಕಂಡಕ್ಟರ್ ಬಂದು ಮಧ್ಯ ದಾರೀಲಿ ಇಳ್ಸೋ ತನಕ ಹೀಗೇ ಸರ್...' ಅದೇ ನೋವು ತುಂಬಿದ ಕಣ್ಣುಗಳು; ಅದೇ ನಗು ಇಂಗಿ ಒಣಗಿದ ತುಟಿಗಳು. ಬರುತ್ತೇನೆ ಎಂದು ಹೇಳಿ ಹಿಂದಿರುಗಿ ಬಾವಿಯ ದಂಡೆಗೆ ಒರಗಿ ನಿಂತಿದ್ದ ನಾಗರಾಜನನ್ನು ಸೇರಿಕೊಂಡೆ.

ಪ್ರತಿಕ್ರಿಯಿಸಿ: **feedback@sudha.co.in**